ಈ) ಮತ್ತು ಉ) ನಿಗದಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿ ಮಾಡದಿದ್ದುದರಿಂದ ಹಾಗೂ ಇನ್ನಿತರ ಅಗತ್ಯ ಮಾಹಿತಿಗಳನ್ನು ಪರೀಕ್ಷಾ ಮಂಡಳಿಗೆ ನೀಡದಿದ್ದ ಕಾರಣ ಕೆಲವು ಅನಧಿಕೃತ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅನುಮತಿ ನೀಡಿರುವುದಿಲ್ಲ. ಅದರಂತೆಯೇ, ಹೊನ್ನಾನಾಯಕ್ ಶಿಕ್ಷಣ ಸಂಸ್ಥೆಯವರು ಯಾವುದೇ ಪರೀಕ್ಷೆ ಶುಲ್ಕವನ್ನು ಹಾಗೂ ಅರ್ಹ ವಿದ್ಯಾರ್ಥಿಗಳ ಮೂಲ ದಾಖಲಾತಿ ಮತ್ತು ಇನ್ನಿತರ ಅಗತ್ಯ ಮಾಹಿತಿಗಳನ್ನು ಪರೀಕ್ಷಾ ಮಂಡಳಿಗೆ ನೀಡದಿದ್ದ ಕಾರಣ ಪರೀಕ್ಷೆಗೆ ಅವಕಾಶ ನೀಡಿರುವುದಿಲ್ಲ.

ರಾಜ್ಯದ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆ

756 - ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಮತ್ತು ಸಕಾಲದಲ್ಲಿ ಔಷಧಿಗಳು ವಿತರಣೆ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿ ಕ್ರಮವೇನು?

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿರುವುದಿಲ್ಲ.

ಆ) ಔಷಧಿಗಳಿಗೆ ನಿಗಧಿಪಡಿಸಿದ ಅನುದಾನಕ್ಕನುಗುಣವಾಗಿ ಸಕಾಲದಲ್ಲಿ ಔಷಧಿಗಳನ್ನು ಪಡಿಯಲು ರಾಜ್ಯದ ಆಸ್ಪತ್ರೆಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಈ ಹಿಂದೆ ಔಷಧಿಗಳ ಖರೀದಿಗೆಂದು ಆಯವ್ಯಯದಲ್ಲಿ ನಿಗದಿಪಡಿಸಲಾಗುತ್ತಿದ್ದೆ ಅನುದಾನದಲ್ಲಿ ಶೇ.40ರಷ್ಟನ್ನು ಮೇಜರ ಆಸ್ಪತ್ರೆಗಳಿಗೆ ಮತ್ತು ಜಿಲ್ಲಾ ಪಂಚಾಯತ್‌ಗಳಡಿಯಲ್ಲಿ ಬರುವ ಇತರೆ ಆಸ್ಪತ್ರೆಗಳಿಗೆ ಹಾಗೂ ಉಳಿದ ಶೇ.60ರಷ್ಟನ್ನು ಸರ್ಕಾರಿ ಔಷಧ ಮಳಿಗೆಗೆ ನೀಡಲಾಗುತ್ತಿದ್ದುದನ್ನು ಬದಲಾಯಿಸಿ ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿನ ಔಷಧಗಳ ಕೊರತೆಯನ್ನು ನಿವಾರಿಸಲು ಹಾಗೂ ಔಷಧಿಗಳು ತ್ವರಿತವಾಗಿ ದೊರಕುವುದಕ್ಕೆ ಅನುವಾಗುವಂತೆ 1995-96ನೇ ಸಾಲಿನಿಂದ ಜಿಲ್ಲಾ ಪಂಚಾಯತ ಮತ್ತು ಮೇಜರ್ ಆಸ್ಪತ್ರೆಗಳಿಗೆ ಶೇ.60ರಷ್ಟನ್ನು ಹಾಗೂ ಸರ್ಕಾರಿ ಔಷಧಿ ಮಳಿಗೆಗೆ ಶೇ.40ರಷ್ಟು ಅನುದಾನ ನೀಡುವಂತೆ ಆದೇಶಿಸಲಾಗಿದೆ.

ಮಂಗಳೂರಿನ ಜಿಲ್ಲಾ ಆಸ್ಪತ್ರೆಗಳಿಗೆ ವೈದ್ಯಕೀಯ ಉಪಕರಣಗಳ ಖರೀದಿ

757 - ಶ್ರೀ ಎನ್.ಯೋಗೇಶಭಟ್ (ಮಂಗಳೂರು) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತರಿಸುವರೆ?

ಅ) ಮಂಗಳೂರಿನ ಜಿಲ್ಲಾ ಆಸ್ಪತ್ರೆಯಾದ ವೆನ್‌ಲಾಕ್ ಆಸ್ಪತ್ರೆ ಲೇಡಿಗೋಷನ್ ಆಸ್ಪತ್ರೆಗಳಲ್ಲಿ